# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು-1

ಸಂಖ್ಯೆ: ಸಿ4(3) ಇತರೆ/ಸುತ್ತೋಲೆ/07/2012-13 ದಿನಾಂಕ:31.10.2012

**ಜ್ಞಾಪನಾ**

**ವಿಷಯ:** ನವೆಂಬರ್ 7, 2012 ರ ಬುಧವಾರದಂದು ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾ ಗ್ರಂಥಾಲಯದ ಅಭಿವೃದ್ಧಿ ಮತ್ತು ಬಳಕೆ ಉತ್ತೇಜಿಸಲು **'ತೆಗೆಯಿರಿ ಪುಸ್ತಕ ಹೊರಗೆ- ಹಚ್ಚಿರಿ ಜ್ಞಾನದ ದೀವಿಗೆ'** ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಹಾಗೂ ಶಾಲಾ ಗ್ರಂಥಾಲಯಕ್ಕೆ **'ಶಾಲಾ ಶ್ರದ್ಧಾ ವಾಚನಾಲಯ'** ದ ಬಗ್ಗೆ ಟೆಲಿಕಾನ್ಫರೆನ್ಸ್ ನಲ್ಲಿ ಭಾಗವಹಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 1.10.2012.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 3.11.2012 ರಂದು ಅಪರಾಹ್ನ 3.00 ಗಂಟೆಗೆ ಡಿ.ಎಸ್.ಇ.ಆರ್. ಟಿ. ಹೊಸಕೆರೆಹಳ್ಳಿ, ಬೆಂಗಳೂರು ಇಲ್ಲಿ ಟೆಲಿಕಾನ್ಫರೆನ್ಸ್ ಆಯೋಜಿಸಲಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳಾದ ಉಪನಿರ್ದೇಶಕರು (ಆಡಳಿತ) (ಅಭಿವೃದ್ಧಿ) ಶಿಕ್ಷಣಾಧಿಕಾರಿಗಳು ಹಾಗು ವಿಷಯ ಪರಿವೀಕ್ಷಕರುಗಳು ಡಯಟ್ ಉಪನ್ಯಾಸಕರುಗಳು, ಎಲ್ಲರೂ ಡಯಟ್ ಸ್ವೀಕೃತಿ ಕೇಂದ್ರದಲ್ಲಿ ಹಾಜರಾಗುವುದು ಹಾಗು ತಾಲ್ಲೂಕಿನ ಸ್ವೀಕೃತಿ ಕೇಂದ್ರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರುಗಳು, ಬಿ.ಆರ್.ಪಿ ಹಾಗು ಸಿ.ಆರ್.ಪಿ.ಗಳು ಹಾಜರಾಗಿ ಮಾಹಿತಿ ಪಡೆದು, ನಂತರ ಶಾಲೆಗಳಲ್ಲಿ ದಿನಾಂಕ 7.11.2012 ರಂದು ನಡೆಯುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಿಳಿಸಿದೆ. ಈ ಕಾರ್ಯಕ್ರಮ ಖರ್ಚು ವೆಚ್ಚವನ್ನು ಸರ್ವ ಶಿಕ್ಷಣ ಅಭಿಯಾನ ಕಛೇರಿಯ ಆಡಳಿತಾತ್ಮಕ ವೆಚ್ಚದಿಂದ ಭರಿಸುವುದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.1.

ಇವರಿಗೆ

- ✓ ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) (ಅಭಿವೃದ್ಧಿ) ಸಾ.ಶಿ.ಇ.
- ✓ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ಪ್ರತಿಯನ್ನು:

- ✓ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಹೊಸಕೆರೆಹಳ್ಳಿ, ಬೆಂಗಳೂರು.1.
- ✓ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ರವರ ಮಾಹಿತಿಗೆ ಹಾಗೂ ಖರ್ಚು ವೆಚ್ಚಗಳ ಭರಿಸುವಿಕೆಗೆ ಸೂಚನೆ ನೀಡಲು ಕೋರಿದೆ.
- ✓ ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ: ಸಿ4(3) ಇತರೆ/ಸುತ್ತೋಲೆ/07/2012-13 ದಿನಾಂಕ: 01.10.2012

**ಸುತ್ತೋಲೆ**

**ವಿಷಯ:** ನವೆಂಬರ್ 7, 2012 ರ ಬುಧವಾರದಂದು ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾ ಗ್ರಂಥಾಲಯದ ಅಭಿವೃದ್ಧಿ ಮತ್ತು ಬಳಕೆ ಉತ್ತೇಜಿಸಲು **'ತೆಗೆಯಿರಿ ಪುಸ್ತಕ ಹೊರಗೆ- ಹಚ್ಚಿರಿ ಜ್ಞಾನದ ದೀವಿಗೆ'** ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಹಾಗೂ ಶಾಲಾ ಗ್ರಂಥಾಲಯಕ್ಕೆ **'ಶಾಲಾ ಶ್ರದ್ಧಾ ವಾಚನಾಲಯ'** ಎಂದು ನಾಮಕರಣ ಮಾಡಲು ಕ್ರಮ ಕೈಗೊಳ್ಳುವ ಕುರಿತು.

--------

'ಪುಸ್ತಕಗಳು ಜ್ಞಾನದ ಹೆಬ್ಬಾಗಿಲುಗಳು' ಎಂಬ ಮಾತಿದೆ. ಈ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಗ್ರಂಥಾಲಯದ ಅಭಿವೃದ್ಧಿ ಮತ್ತು ಸದ್ಬಳಕೆಯ ಅವಶ್ಯಕತೆ ಇದೆ. ಅನೇಕ ಶಾಲೆಗಳಲ್ಲಿ ಗ್ರಂಥಾಲಯಗಳಿದ್ದಾಗ್ಯೂ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳದೆ ಇರುವುದರಿಂದ ಅಮೂಲ್ಯವಾದ ಪುಸ್ತಕ ಭಂಡಾರ ವ್ಯರ್ಥವಾಗುತ್ತಿದೆ. ಇದನ್ನು ಮನಗಂಡು ನವೆಂಬರ್ 7, 2012 ರ ಬುಧವಾರದಂದು ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಾಲಾ ಗ್ರಂಥಾಲಯದ ಅಭಿವೃದ್ಧಿ ಮತ್ತು ಬಳಕೆ ಉತ್ತೇಜಿಸಲು **'ತೆಗೆಯಿರಿ ಪುಸ್ತಕ ಹೊರಗೆ-ಹಚ್ಚಿರಿ ಜ್ಞಾನದ ದೀವಿಗೆ'** ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ. ಹಾಗೂ ಇದೇ ದಿನ ಶಾಲೆಯ ಗ್ರಂಥಾಲಯಕ್ಕೆ **ಶಾಲಾ 'ಶ್ರದ್ಧಾ' ವಾಚನಾಲಯ** ಎಂದು ನಾಮಕರಣಗೊಳಿಸಲು ಸೂಚಿಸಿದೆ.

**ಈ ಕಾರ್ಯಕ್ರಮವು ಸೂಚಿತ ದಿನದಂದು ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ತಪ್ಪದೆ ನಡೆಯುವಂತೆ ಅಗತ್ಯ ಕ್ರಮ ಜರುಗಿಸುವಂತೆ ಈ ಮೂಲಕ ಸೂಚಿಸಿದೆ ಹಾಗೂ ಈ ಸುತ್ತೋಲೆಯಲ್ಲಿರುವ ಅಂಶಗಳು ಪ್ರತಿ ಶಾಲೆಗೂ ತಲುಪುವಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.**

**ಕಾರ್ಯಕ್ರಮದ ಉದ್ದೇಶಗಳು:-**

1. ಮಕ್ಕಳಲ್ಲಿ ಪುಸ್ತಕಗಳನ್ನು ಓದುವ ಅಭಿರುಚಿಯನ್ನು ಬೆಳೆಸುವ ಮೂಲಕ ಅವರ ಜ್ಞಾನದ ಹರವನ್ನು ವಿಸ್ತರಿಸುವುದು.
2. ಶಾಲಾ ಗ್ರಂಥಾಲಯದ ಬಳಕೆಯನ್ನು ಚುರುಕುಗೊಳಿಸುವುದು.
3. ಶಾಲಾ ಗ್ರಂಥಾಲಯವನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಅಭಿವೃದ್ಧಿಪಡಿಸಿ ವ್ಯವಸ್ಥಿತವಾಗಿ ರೂಪುಗೊಳಿಸುವುದು.

**ಕಾರ್ಯಕ್ರಮದ ರೂಪ ರೇಷೆ:-**

**(ಅ) ಕಾರ್ಯಕ್ರಮ ಮುನ್ನ:**

1. ಶಾಲಾ ಗ್ರಂಥಾಲಯಕ್ಕೆ ಅಗತ್ಯವಾದ ಪುಸ್ತಕ/ವೃತ್ತ ಪತ್ರಿಕೆಗಳನ್ನು ಲಭ್ಯವಿರುವ ಶಾಲಾ ನಿಧಿಯಿಂದ ಖರೀದಿಸುವುದು.
2. ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಸಮುದಾಯದ ದಾನಿಗಳು ಪುಸ್ತಕಗಳನ್ನು ಶಾಲೆಗೆ ನೀಡುವ ಸಂಬಂಧ ಶಾಲಾ ಮುಖ್ಯ ಶಿಕ್ಷಕರು ನವೆಂಬರ್ ತಿಂಗಳ ಮೊದಲ ವಾರದಲ್ಲಿ ವ್ಯಾಪಕ ಪ್ರಚಾರ ನೀಡುವುದು.
3. ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಸಮುದಾಯದ ದಾನಿಗಳಿಂದ ಶಾಲಾ ಗ್ರಂಥಾಲಯಕ್ಕೆ ಅಗತ್ಯವಾದ ಪುಸ್ತಕಗಳು, ಕಪಾಟು/ರ್‍ಯಾಕ್‌ಗಳನ್ನು ದೇಣಿಗೆ ರೂಪದಲ್ಲಿ ಸಂಗ್ರಹಿಸುವುದು. ಸಂಗ್ರಹಿಸಿದ ಪುಸ್ತಕಗಳಿಗೆ ಶಾಲಾ ಮುಖ್ಯಸ್ಥರು ಸ್ವೀಕೃತಿ ನೀಡುವುದು ಹಾಗೂ ಶಾಲೆಯ ಗ್ರಂಥಾಲಯ ದಾಸ್ತಾನಿಗೆ ಪುಸ್ತಕಗಳನ್ನು ತೆಗೆದುಕೊಳ್ಳುವುದು.
4. ಶಾಲೆಯಲ್ಲಿರುವ ಪುಸ್ತಕಗಳನ್ನು ರ್‍ಯಾಕ್ ಅಥವಾ ಕಪಾಟಿನಲ್ಲಿ ವ್ಯವಸ್ಥಿತವಾಗಿ ಜೋಡಿಸುವುದು.

5. ಗ್ರಂಥಾಲಯದಲ್ಲಿರುವ ಪುಸ್ತಕಗಳ ವಿತರಣೆಯ ವಿವರಗಳನ್ನು ಪುಸ್ತಕಗಳ ವಿತರಣಾ ವಹಿಯಲ್ಲಿ ನಮೂದಿಸುವುದು.
6. ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಸೂಚಿತ ದಿನ ಹಾಗೂ ವೇಳೆಯಲ್ಲಿ ವಿದ್ಯಾರ್ಥಿಗಳು ಕನ್ನಡ ಭಾಷೆಯ ಪುಸ್ತಕಗಳನ್ನೇ ಓದಲು ಸೂಚಿಸುವುದು. ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಪುಸ್ತಕಗಳು ಪಠ್ಯಪುಸ್ತಕಗಳಿಂದ ಹೊರತಾದ ಕಥೆ, ಕಾದಂಬರಿ, ಪ್ರವಾಸ ಕಥನ, ಕವನ ಸಂಕಲನ, ರಾಷ್ಟ್ರ ಭಕ್ತ/ಮಹಾನ್ ವ್ಯಕ್ತಿಗಳ ಜೀವನ ಕಥೆ/ಆತ್ಮ ಚರಿತ್ರೆಗೆ ಸಂಬಂಧಿಸಿದ ಪುಸ್ತಕಗಳು, ಇತ್ಯಾದಿಗಳು ಇರುವಂತೆ ನೋಡಿಕೊಳ್ಳುವುದು.
7. ಪುಸ್ತಕ ಓದಿದ ಕೆಲವು ಹಿರಿಯ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು.

**(ಆ) ಕಾರ್ಯಕ್ರಮ ಸಂಘಟನೆ:**

1. ಕಾರ್ಯಕ್ರಮದ ಮುನ್ನಾ ದಿನ ಅಂದರೆ ನವೆಂಬರ್ 6, 2012 ರಂದು ಕಾರ್ಯಕ್ರಮಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಕೈಗೊಳ್ಳುವುದು.
2. ಶಾಲಾ ಗ್ರಂಥಾಲಯಗಳಿಗೆ ಸಮುದಾಯದ/ದಾನಿಗಳಿಂದ ಪುಸ್ತಕಗಳು ಕೊಡುಗೆಯಾಗಿ ಬರಬೇಕಾಗಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮಕ್ಕೆ ವ್ಯಾಪಕ ಪ್ರಚಾರ ನೀಡುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಇವರು ಸ್ಥಳೀಯ ರೇಡಿಯೋಗಳಲ್ಲಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡುವುದು ಹಾಗೂ ನವೆಂಬರ್ ತಿಂಗಳ ಮೊದಲ ವಾರದಲ್ಲಿ ಜಿಲ್ಲಾ ಹಂತದಲ್ಲಿ ಸುದ್ದಿಗೋಷ್ಠಿ ನಡೆಸುವುದು ಹಾಗೂ ಸುದ್ದಿಗೋಷ್ಠಿಯಲ್ಲಿ ಈ ಕೆಳಗಿನ ಮಾಹಿತಿಯನ್ನು ನೀಡುವುದು.

- ನವೆಂಬರ್ 7, 2012 ರ ಬುಧವಾರದಂದು ನಡೆಯುವ ಕಾರ್ಯಕ್ರಮದ ಕುರಿತ ವಿವರವನ್ನು ಒದಗಿಸುವುದು.
- ಶಾಲೆಯ ಗ್ರಂಥಾಲಯಕ್ಕೆ ಸ್ವಯಂ ಸೇವಾ ಸಂಸ್ಥೆಗಳು, ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು, ಸಮುದಾಯದ ದಾನಿಗಳು ಪಠ್ಯಪುಸ್ತಕಗಳಿಂದ ಹೊರತಾದ ಕಥೆ, ಕಾದಂಬರಿ, ಪ್ರವಾಸ ಕಥನ, ಕವನ ಸಂಕಲನ, ರಾಷ್ಟ್ರ ಭಕ್ತ/ಮಹಾನ್ ವ್ಯಕ್ತಿಗಳ ಜೀವನ ಕಥೆ/ಆತ್ಮ ಚರಿತ್ರೆಗೆ ಸಂಬಂಧಿಸಿದ ಪುಸ್ತಕಗಳು, ಶಬ್ದಕೋಶ, ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಪುಸ್ತಕಗಳು ಇತ್ಯಾದಿಗಳನ್ನು ಕೊಡುಗೆಯಾಗಿ ನೀಡಲು ಮನವಿ ಮಾಡುವುದು.

3. ಕಾರ್ಯಕ್ರಮದ ದಿನ ಶಾಲೆಯಲ್ಲಿರುವ ಎಲ್ಲಾ ಪುಸ್ತಕಗಳನ್ನು ಕೊಠಡಿಯಲ್ಲಿ ಪ್ರದರ್ಶನಕ್ಕೆ ಇಡುವುದು.
4. ಶಾಲೆಯ ಆಸಕ್ತ ಪೋಷಕರು/ಎಸ್.ಡಿ.ಎಂ.ಸಿ. ಸದಸ್ಯರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸವುದು.
5. ಸ್ಥಳೀಯ ಸಾಹಿತಿ / ಬರಹಗಾರರ ಪೈಕಿ ಒಬ್ಬ ಪ್ರಮುಖರನ್ನು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲು ಆಹ್ವಾನಿಸುವುದು.
6. ಶಾಲೆಯಲ್ಲಿ ಗ್ರಂಥಾಲಯ ಇರಿಸಿರುವ ಕೋಣೆಗೆ **'ಶಾಲಾ ಶ್ರದ್ಧಾ ವಾಚನಾಲಯ'** ಎಂದು ಬೋರ್ಡ್ ಬರೆಸಿ ಹಾಕುವುದು ಹಾಗೂ ಶಾಲೆಗೆ ಆಗಮಿಸುವ ಅತಿಥಿಗಳಿಂದ ವಾಚನಾಲಯದ ಉದ್ಘಾಟನೆ ಮಾಡಿಸುವುದು.
7. ಪುಸ್ತಕಗಳ ಮಹತ್ವ, ಓದುವ ಹವ್ಯಾಸದಿಂದಾಗುವ ಪ್ರಯೋಜನ, ಶಾಲಾ ಗ್ರಂಥಾಲಯದ ಬಳಕೆಯ ಮಹತ್ವ, ಈ ನಿಟ್ಟಿನಲ್ಲಿ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಪ್ರಾರ್ಥನೆಯ ವೇಳೆಯಲ್ಲಿ ಮುಖ್ಯ ಅತಿಥಿಗಳಿಂದ 5 ರಿಂದ 10 ನಿಮಿಷದ ಕಿರು ಭಾಷಣ ಏರ್ಪಡಿಸುವುದು.
8. **ಪ್ರಾರ್ಥನೆಯ ನಂತರ ಎಲ್ಲಾ ವಿದ್ಯಾರ್ಥಿಗಳು ಕೊಠಡಿಯಲ್ಲಿ ಪ್ರದರ್ಶನಕ್ಕೆ ಇರಿಸಲಾದ ಪುಸ್ತಕಗಳನ್ನು ಅವಲೋಕಿಸಿ ತಮಗೆ ಇಚ್ಛಿಸುವ ಪುಸ್ತಕಗಳನ್ನು ಎರವಲು ಪಡೆದು ಅರ್ಧ ಗಂಟೆಯ ಕಾಲ (ಮುಂಚಾನೆ 11.00 ರಿಂದ 11.30 ರವರೆಗೆ) ನಿಶ್ಯಬ್ಧವಾಗಿ ಓದಲು ವ್ಯವಸ್ಥೆ ಮಾಡಬೇಕು.**
9. **ರಾಜ್ಯದ ಎಲ್ಲ ಶಾಲೆಗಳಲ್ಲಿ ಕಡ್ಡಾಯವಾಗಿ ಸೂಚಿತ ಸಮಯದಲ್ಲಿ ಏಕಕಾಲಕ್ಕೆ ವಿದ್ಯಾರ್ಥಿಗಳು ನಿಶ್ಯಬ್ಧವಾಗಿ ಓದುವುದರಲ್ಲಿ ತಲ್ಲೀನರಾಗುವಂತೆ ಅಗತ್ಯ ವ್ಯವಸ್ಥೆಯಾಗುವಂತೆ ತಪ್ಪದೆ ಕ್ರಮ ಕೈಗೊಳ್ಳಲು ಸೂಚಿಸಿದೆ.**
10. ಈ ಕ್ರಮವು ಕಾರ್ಯಕ್ರಮಕ್ಕೆ ಅಗತ್ಯವಾದ ಗಂಭೀರತೆಯನ್ನು ಕೊಡುವುದರ ಜೊತೆ ಶಾಲೆಗಳಲ್ಲಿ ಗ್ರಂಥಾಲಯ ಬಳಕೆಯ ಪ್ರಾಮುಖ್ಯತೆ ಹೆಚ್ಚಿಸುವುದು ಮತ್ತು ವಿದ್ಯಾರ್ಥಿಗಳು ಮೌನವಾಗಿ ಓದುವುದರ ಮಹತ್ವ ತಿಳಿದುಕೊಳ್ಳಲು ನೆರವಾಗುವುದು.

11. ಆ ದಿನದ ಕಾರ್ಯಕ್ರಮದ ಕುರಿತು ಪ್ರತಿ ಶಾಲೆಯಿಂದ ಇಬ್ಬರು ಮಕ್ಕಳು ತಮ್ಮ ಅನಿಸಿಕೆಯನ್ನು ಲಿಖಿತವಾಗಿ ಪೋಸ್ಟ್ ಕಾರ್ಡಿನಲ್ಲಿ ಶಿಕ್ಷಣ ಮಂತ್ರಿಗಳಿಗೆ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಕೊಠಡಿ ಸಂಖ್ಯೆ 330, ವಿಧಾನ ಸೌಧ, ಬೆಂಗಳೂರು-1) ಕಳುಹಿಸಲು ಕ್ರಮಕೈಗೊಳ್ಳುವುದು. ಇದು ಮಕ್ಕಳಲ್ಲಿ ಬರವಣಿಗೆ ಕೌಶಲ್ಯ ವೃದ್ಧಿಸಲು ನೆರವಾಗುತ್ತದೆ.
12. ಉತ್ತಮ ಪ್ರಯತ್ನಗಳನ್ನು ಫೋಟೋ ಸಹಿತ ದಾಖಲಿಸಿ, ವರದಿ ಮಾಡಲು ತಿಳಿಸಿದೆ.

ಮೇಲಿನಂತೆ ನಡೆಯುವ ಕಾರ್ಯಕ್ರಮವು ಸಾಂಕೇತಿಕವಾಗಿದ್ದು, ಕಾರ್ಯಕ್ರಮದ ನಂತರ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದರ ಮೂಲಕ ಗ್ರಂಥಾಲಯದ ನಿರಂತರ ಬಳಕೆಗೆ ಕ್ರಮ ಕೈಗೊಳ್ಳುವುದು.

**(ಇ) ಕಾರ್ಯಕ್ರಮದ ನಂತರ:**

1. ಅನೇಕ ಶಾಲೆಗಳು ಮಕ್ಕಳಿಂದ ಪುಸ್ತಕಗಳು ಹಾಳಾಗುತ್ತವೆ ಎಂಬ ಕಾರಣಕ್ಕೆ ಗ್ರಂಥಾಲಯವನ್ನು ಬಳಕೆ ಮಾಡದೆ ಇರುವುದನ್ನು ಗಮನಿಸಲಾಗಿದೆ. ಮಕ್ಕಳು ಪುಸ್ತಕಗಳನ್ನು ಬಳಸುವುದರಿಂದ ಪುಸ್ತಕಗಳು ಹಾನಿಗೊಳಗಾದಲ್ಲಿ ಯಾವುದೇ ರೀತಿಯ ಸಮಸ್ಯೆಯಿಲ್ಲ ಮತ್ತು ಈ ಕಾರಣಕ್ಕೆ ಭಯಪಟ್ಟು ಗ್ರಂಥಾಲಯದ ಬಳಕೆ ಮಾಡದೆ ಇರುವ ಶಿಕ್ಷಕರ ಮನೋಭಾವವನ್ನು ಬದಲಾಯಿಸಲು ಅಗತ್ಯ ನಿರ್ದೇಶನ / ತಿಳುವಳಿಕೆ ನೀಡುವುದು.
2. ಪ್ರತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಗ್ರಂಥಾಲಯದ ಬಳಗ ಸ್ಥಾಪಿಸುವುದು. ಈ ಬಳಗದ ಮೂಲಕ ಮಕ್ಕಳೆ ಗ್ರಂಥಾಲಯದ ನಿರ್ವಹಣೆಯನ್ನು ಮಾಡಲು ಪ್ರೇರೇಪಿಸುವುದು.
3. ಹಿರಿಯ ವಿದ್ಯಾರ್ಥಿಗಳು ಪುಸ್ತಕಗಳನ್ನು ವಿತರಿಸಿ ವಿತರಣಾ ವಹಿಯಲ್ಲಿ ನಮೂದಿಸಿ ಪುಸ್ತಕಗಳನ್ನು ಇತರೆ ವಿದ್ಯಾರ್ಥಿಗಳಿಗೆ ವಿತರಿಸುವ ವ್ಯವಸ್ಥೆ ಆಗಬೇಕು.
4. ಶಾಲೆಗಳಲ್ಲಿ ಶಿಕ್ಷಕರು ರಜೆಯಲ್ಲಿದ್ದ ಅವಧಿಯಲ್ಲಿ ಅಥವಾ ಶಾಲೆಯಲ್ಲಿ ಲಭ್ಯವಾಗುವ ಬಿಡುವಿನ ವೇಳೆಯ ಒಂದು ಅವಧಿಯಲ್ಲಿ ಮೇಲೆ ಸೂಚಿಸಿದ ಕಾರ್ಯಕ್ರಮದಲ್ಲಿ ನಡೆದಂತೆ ಇಡೀ ಶಾಲೆಯ ಗ್ರಂಥಾಲಯದ ಪುಸ್ತಕಗಳನ್ನು ಓದಲು ಪ್ರೇರೇಪಿಸುವುದು ಮತ್ತು ಮಕ್ಕಳು ಇಚ್ಛಿಸಿದಲ್ಲಿ ಪುಸ್ತಕಗಳನ್ನು ಮನೆಗೆ ಕೊಂಡೊಯ್ಯಲು ಅವಕಾಶ ಕಲ್ಪಿಸುವುದು.
5. ಹಿರಿಯ ವಿದ್ಯಾರ್ಥಿಗಳು ತಾವು ಓದಿದ ಕಥೆ / ಬರಹಗಳ ಬಗ್ಗೆ ಕಿರಿಯ ವಿದ್ಯಾರ್ಥಿಗಳಿಗೆ ಹೇಳುವ ಮೂಲಕ ಅವರನ್ನು ಓದಲು ಪ್ರೇರೇಪಿಸುವುದು.
6. ಮಕ್ಕಳನ್ನು ಹತ್ತಿರದ ಸಾರ್ವಜನಿಕ ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ ಪುಸ್ತಕಗಳನ್ನು ಪರಿಚಯಿಸುವುದು.

**ಕಾರ್ಯಕ್ರಮದ ಮೇಲುಸ್ತುವಾರಿ:**

ಈ ಕಾರ್ಯಕ್ರಮದದಲ್ಲಿ ಎಲ್ಲ ಕ್ಷೇತ್ರಮಟ್ಟದ ಅಧಿಕಾರಿ/ಸಿಬ್ಬಂದಿಗಳು ಸಕ್ರಿಯವಾಗಿ ಭಾಗವಹಿಸುವಂತೆ ಕ್ರಮ ಕೈಗೊಳ್ಳುವುದು. ಸಿ.ಆರ್.ಪಿ., ಇ.ಸಿ.ಓ., ಬಿ.ಆರ್.ಪಿ., ಬಿ.ಆರ್.ಸಿ., ಬಿ.ಇ.ಓ., ಡಯಟ್ ಹಿರಿಯ ಉಪನ್ಯಾಸಕರು/ಉಪನ್ಯಾಸಕರು, ವಿಷಯ ಪರಿವೀಕ್ಷಕರು, ಶಿಕ್ಷಣಾಧಿಕಾರಿಗಳು, ಡಯಟ್ ಪ್ರಾಂಶುಪಾಲರು, ಉಪನಿರ್ದೇಶಕರು (ಆಡಳಿತ) ಇವರು ಪ್ರತಿಯೊಬ್ಬರು ಪ್ರತ್ಯೇಕವಾಗಿ ಯಾವುದಾದರೂ ಒಂದು ಶಾಲೆಯಲ್ಲಿ ಕಾರ್ಯಕ್ರಮ ನಡೆಯುವ ಶಾಲೆಯಲ್ಲಿ ಭಾಗವಹಿಸಿ, ಸೂಚಿತ ಸಮಯದಲ್ಲಿ ಅವರೂ ಸಹ ಒಂದು ಪುಸ್ತಕವನ್ನು ತೆಗೆದುಕೊಂಡು ವಿದ್ಯಾರ್ಥಿಗಳು, ಶಿಕ್ಷಕರೊಂದಿಗೆ ಮೌನವಾಗಿ ಓದಿನಲ್ಲಿ ತೊಡಗಿಕೊಳ್ಳಲು ಸೂಚಿಸಿದೆ.

ಈ ಕಾರ್ಯಕ್ರಮದ ಮೂಲಕ ಶಾಲಾ ಗ್ರಂಥಾಲಯದ ಅಭಿವೃದ್ಧಿ ಹಾಗೂ ಬಳಕೆಯನ್ನು ಉತ್ತೇಜಿಸಲು ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಲು ಸೂಚಿಸಿದೆ.

1/10/12

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು.

**ಇವರಿಗೆ ಮುಂದಿನ ಕ್ರಮಕ್ಕಾಗಿ**

1. ಎಲ್ಲ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಸಾ.ಶಿ.ಇ.
2. ಎಲ್ಲ ಡಯಟ್ ಪ್ರಾಂಶುಪಾಲರು
3. ಎಲ್ಲ ಡಿವೈಪಿಸಿಗಳು
4. ಎಲ್ಲ ಬಿ.ಇ.ಓ ಮತ್ತು ಬಿ.ಆರ್.ಸಿಗಳು

ಪ್ರತಿಯನ್ನು:

- ✓ ಮಾನ್ಯ ಶಿಕ್ಷಣ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬೆಂಗಳೂರು.
- ✓ ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬೆಂಗಳೂರು.
- ✓ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
- ✓ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ,
- ✓ ರಾಜ್ಯದ ಎಲ್ಲಾ ಸಹ ನಿರ್ದೇಶಕರು
- ✓ ರಾಜ್ಯದ ಎಲ್ಲಾ ಸಿ.ಟಿ.ಇ. ಪ್ರಿನ್ಸಿಪಾಲರು
- ✓ ಕಛೇರಿ ಪ್ರತಿ